T.C : 41

017/DM/22

| Register Number | | | | | | | | | |
|---|---|---|---|---|---|---|---|---|---|

# DEPARTMENTAL EXAMINATIONS

## TRANSLATION TEST – SECOND PAPER – TRANSLATION OF NEWS PAPER REPORT IN KANNADA TO ENGLISH

(Without Books)

Maximum Time : 2.30 hours | Maximum Marks : 100

**Answer ALL questions.**

1. Translate into English : $(1 \times 80 = 80)$

ಸಂಸ್ಕೃತಿ

ಮನುಷ್ಯ ಶಿಶು ಇತರ ಪ್ರಾಣಿಗಳ ಶಿಶುಗಳಿಗಿಂತ ಬಹು ದುರ್ಬಲವಾದುದು. ಶಿಶುವು ಸರ್ವಾಂಗ ಸಂಪೂರ್ಣವಾಗಿದ್ದರೂ ಅದು ಎದ್ದು ಓಡಾಡುವುದಕ್ಕೆ ಎರಡು ವರ್ಷವಾದರೂ ಬೇಕು. ಹಾಗೆ ಎದ್ದು ಓಡಾಡುವುದಕ್ಕೆ ಮುಂಚೆ ಎಷ್ಟೋಸಲ ಎದ್ದು ಬಿದ್ದು ಪ್ರಯತ್ನ ಮಾಡಿ ಕೊನೆಗೆ ಸ್ವತಂತ್ರವಾಗಿ ಓಡಾಡಲು ಶಕ್ತವಾಗುತ್ತದೆ. ನಮಗೆಲ್ಲಾ ಓಡಾಡುವುದು ಬಹಳ ಅಭ್ಯಾಸವಾಗಿರುವುದರಿಂದ ಅದನ್ನು ಕಲಿಯುವಾಗ ಪಟ್ಟ ಶ್ರಮವೆಲ್ಲಾ ಮರೆತು ಹೋಗಿದೆ. ಆದರೂ ಇಂದಿನ ನಮ್ಮ ನಡೆಗೆ, ಓಡಾಟಕ್ಕೆ ಹಿಂದೆ ಆರಂಭದಲ್ಲಿ ಮಾಡಿದ ಹಲವಾರು ಅಲ್ಲ, ನೂರಾರು ಪ್ರಯತ್ನಗಳು ಕಾರಣ.

ಹೀಗೆ ಹಲವಾರು ಪ್ರಯತ್ನಗಳ, ಹಲವಾರು ವರ್ಷಗಳ ಜಾಗರೂಕತೆ ಹಾಗೂ ಒಪ್ಪುಗೆಯ ಫಲವಾಗಿ ಮನುಷ್ಯರಲ್ಲಿ ಒಂದು ಹೊಂದಾಣಿಕೆ, ಒಂದು ಹೆಚ್ಚುತನ, ಒಂದು ಹಿರಿಯತನ ಕಾಣಿಸುತ್ತದೆ. ಆ ಹೊಂದಾಣಿಕೆ, ಆ ಹೆಚ್ಚಳ, ಆ ಹಿರಿಯತನ ಮೂರೂ ಸೇರಿ ಮುಪ್ಪುರಿಗೊಂಡ ಮನೋಭಾವ ಸಂಸ್ಕೃತಿ.

'ಸಂಸ್ಕೃತಿ' ಎನ್ನುವ ಮಾತು ಈಚಿನದು. ಇಂಗ್ಲೀಷಿನ 'ಕಲ್ಚರ್' ಎಂಬ ಮಾತಿಗೆ ಸಂವಾದಿಯಾಗಿ ಬಂದಿರುವುದು. ಇದಕ್ಕಿಂತ 'ವಿನಯ' ಎನ್ನುವುದು ಸೂಕ್ತವಾದೀತು. ಇದನ್ನು ಹೊಸ ಶಬ್ದ ಎಂದು ನಾವು ನೂಕಬೇಕಾಗಿಲ್ಲ. ನಮಗೆ ಸಂಸ್ಕೃತಿ – ವಿನಯ – ಎರಡೂ ಇರಲಿ. ಈ ಗುಣ ಎಲ್ಲರಿಗೂ ಇರಬೇಕು.

ಮೊದಲಿಗೆ, ಹೊಂದಾಣಿಕೆ, ಹೆಚ್ಚುತನ, ಹಿರಿಯತನ ಇವು ಮೂರೂ ಇರಬೇಕು ಸಂಸ್ಕೃತಿಯಲ್ಲಿ.

[Turn over

2. ಈ ಕೆಳಕಂಡ ಗಾದೆಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿರಿ. (10 × 2 = 20)

(a) ಹಾಸಿಗೆ ಇದ್ದಷ್ಟು ಕಾಲು ಚಾಚು.

(b) ಹೊಳೆಯುವುದೆಲ್ಲಾ ಚಿನ್ನವಲ್ಲ.

(c) ಆರೋಗ್ಯವೇ ಭಾಗ್ಯ.

(d) ಒಗ್ಗಟ್ಟಿನಲ್ಲಿ ಬಲವಿದೆ.

(e) ಅತಿ ಆಸೆ ಗತಿಕೇಡು.

(f) ನಾಯಿ ಬಾಲ ಡೊಂಕು.

(g) ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ.

(h) ತುಂಬಿದ ಕೊಡ ತುಳುಕುವುದಿಲ್ಲ.

(i) ಕೈಗೆ ಬಂದ ತುತ್ತು ಬಾಯಿಗಿಲ್ಲ.

(j) ಕಣ್ಣಿಗೆ ಕಾಣದವ ಮನಸ್ಸಿಗೆ ಕಾಣನು.